ಇ) ಹೌದು.

ಈ) ಗ್ರಾಮೀಣ ವಿದ್ಯುದ್ದೀಕರಣ ನಿಗಮದಿಂದ ಧನ ಸಹಾಯ ಲಭ್ಯವಾಗದೇ ಇರುವುದರಿಂದ ಕರ್ನಾಟಕ ವಿದ್ಯುಚ್ಛಕ್ತಿ ಮಂಡಲಿಯ ಧನ ಮೂಲಗಳಿಂದಲೇ ನೀರಾವರಿ ಪಂಪುಗಳನ್ನು ಆಳವಡಿಸಲು ಕ್ರಮ ಕೈಗೊಳ್ಳಲಾಗುತ್ತಿದೆ.

ಶ್ರೀ ಎಂ.ವಿ. ವೆಂಕಟಪ್ಪ.—ಮಾನ್ಯ ಅಧ್ಯಕ್ಷರೇ, ಗ್ರೌಂಡ್ ವಾಟರ್ ರಿಸೋರ್ಸಸ್ ಬಗ್ಗೆ ಸರ್ಕಾರದವರು ಯಾವುದಾದರೂ ಏಜೆನ್ಸಿಗೆ ಕೇಳಿದ್ದೀರಾ. ಯಾವ ಯಾವ ಜಿಲ್ಲೆಗಳಲ್ಲಿ ಯಾವ ಯಾವ ತಾಲ್ಲೂಕಿನಲ್ಲಿ ಗ್ರೌಂಡ್‌ವಾಟರ್ ರಿಸೋರ್ಸಸ್ ಹೇಗಿದೆ ಎಂದು ಯಾವುದಾದರೂ ಏಜೆನ್ಸಿಗೆ ಕೇಳಿದ್ದಿರಾ. ಆ ಏಜೆನ್ಸಿಯವರು ನಿಮಗೆ ಏನು ರಿಪೋರ್ಟ್ ಕೊಟ್ಟಿದ್ದಾರೆ ?

ಶ್ರೀ ಎಸ್.ಎಂ. ಯಾಹ್ಯಾ.—ಮಾನ್ಯ ಅಧ್ಯಕ್ಷರೇ, ಈ ಪ್ರಶ್ನೆ ಯಾರಿಗೆ ಹೋಗಬೇಕು ಎಂದು ಗೊತ್ತಾಗಲಿಲ್ಲ. ಈ ಹೆಸರು ಹಾಕಿದ್ದಾರೆ. ಆದರೆ ಫೈಲು ಮಾನ್ಯ ಶಿವಣ್ಣನವರಿಗೆ ಹೋಗಿದೆಯೆಂದು ಕಾಣುತ್ತದೆ. ಪ್ರಶ್ನೆಯನ್ನು ಕೇಳುವಾಗ ಎರಡು ಇಲಾಖೆಗಳನ್ನು ಸೇರಿಸಿ ಪ್ರಶ್ನೆಯನ್ನು ಕೇಳಿ ಬಿಟ್ಟಿದ್ದಾರೆ. ನನಗೆ ಫೈಲು ಬಂದರೆ ಆದಕ್ಕೆ ನಾನೇ ಉತ್ತರ ಕೊಡುತ್ತೇನೆ. ಅಥವಾ ನೀವು ಪ್ರಶ್ನೆಯನ್ನು ಸ್ವಲ್ಪ ಬೇರೆ ಮಾಡಿ, ಒಂದು ಇಲಾಖೆಗೆ ಸಂಬಂಧಪಟ್ಟ ಹಾಗೆ ಕೇಳಿ.

ಶ್ರೀ ಎಂ.ವಿ. ವೆಂಕಟಪ್ಪ.—ಮಾನ್ಯ ಅಧ್ಯಕ್ಷರೇ, ಇದನ್ನು ಬೇರೆ ಮಾಡುವುದಕ್ಕಾಗುವುದಿಲ್ಲ. ಅಲ್ಲಿ ಎರಡು ವರ್ಷಗಳಿಂದ ಸುಮಾರು ೨೦೦ ಜನರು ಬೋರ್‌ವೆಲ್ ಹಾಕಿದ್ದಾರೆ. ಅದು ಕತ್ತಲೆ. ಪ್ರದೇಶವೆಂದು ಕೆ.ಇ.ಬಿ. ಯವರು ಪವರ್ ಕೊಡುತ್ತಿಲ್ಲ. ಬ್ಯಾಂಕ್‌ನವರು ಸಾಲವನ್ನೂ ಕೊಡುವುದಿಲ್ಲ ಪಿ.ಎಲ್.ಡಿ ಬ್ಯಾಂಕ್‌ನವರು ಮತ್ತು ಸಿಂಡಿಕೇಟ್ ಬ್ಯಾಂಕ್‌ನವರು ಸಾಲವನ್ನು ಕೊಡುವುದಿಲ್ಲ. ಇತ್ತೀಚೆಗೆ ಒಂದು ವಾರದ ಹಿಂದೆ ಹತ್ತು ಬೋರ್‌ವೆಲ್ ಹಾಕಿಸಿದ್ದಾರೆ.

ಅಧ್ಯಕ್ಷರು.—ಇದನ್ನು ಮುಂದಿನ ವಾರ ತೆಗೆದುಕೊಳ್ಳೋಣ.

ಶ್ರೀ ಬಿ. ಶಿವಣ್ಣ.—ನಾನು ಡಿಸ್‌ಕಸ್ ಮಾಡಿ ಹೇಳುತ್ತೇನೆ.

ಅಧ್ಯಕ್ಷರು.—ಡಿಸ್‌ಕಸ್ ಮಾಡಿ ಹೇಳುತ್ತಾರಂತೆ. I will withhold this question. It will come up again next week.

ಶ್ರೀ ಎಂ. ವಿ. ವೆಂಕಟಪ್ಪ.—ನಮ್ಮ ಟೌನಿನಲ್ಲಿ ಕುಡಿಯಲು ನೀರು ಸಿಗದೆ ತೊಂದರೆಯಾಗಿದೆ ಪವರ್ ಕೊಡುತ್ತಿಲ್ಲ. ಹೋದವಾರ ಹತ್ತು ಬೋರ್‌ವೆಲ್‌ಗಳನ್ನು ಹಾಕಿದ್ದಾರೆ. ಒಂದೊಂದು ಬೋರ್‌ವೆಲ್‌ನಲ್ಲಿ ೩-೪ ಸಾವಿರ ಗ್ಯಾಲನ್ ನೀರು ಬರುತ್ತಿತ್ತು. ಇವರು ಪವರ್ ಕೊಡುತ್ತಾ ಇಲ್ಲ. ಮುಳುಬಾಗಿಲು ಟೌನ್‌ನಲ್ಲಿ ಕುಡಿಯಲಿಕ್ಕೆ ನೀರು ಇಲ್ಲ.

ಶ್ರೀ ಎಸ್. ಎಂ. ಯಾಹ್ಯಾ.—ಆ ಫೈಲ್ ಮಾನ್ಯ ಶಿವಣ್ಣನವರ ಹತ್ತಿರ ಹೋಗಿದೆ, ನನ್ನ ಹತ್ತಿರ ಇಲ್ಲ.

ಶ್ರೀ ಎಂ. ವಿ. ವೆಂಕಟಪ್ಪ.—ಫೈಲ್ ಯಾರ ಹತ್ತಿರ ಹೋಗಿದೆಯೋ ಅದು ಬೇರೆ ವಿಷಯ. ಅಲ್ಲಿ ಕುಡಿಯಲಿಕ್ಕೆ ನೀರಿಲ್ಲ ಮಾನ್ಯ ಶಿವಣ್ಣನವರೇ ಹೇಳಲಿ,

ಅಧ್ಯಕ್ಷರು.—ಆ ಕ್ವೆಶ್ಚನ್ ಹೆಲ್ಡ್ ಓವರ್ ಮಾಡಿದ್ದೇನೆ.

ಶ್ರೀ ಎಂ. ವಿ. ವೆಂಕಟಪ್ಪ.—ಲ್ಯಾಪ್ಸ್ ಆಗಬಾರದು.

ಅಧ್ಯಕ್ಷರು.—ಲ್ಯಾಪ್ಸ್ ಆಗುವುದಿಲ್ಲ. ಮುಂದಿನವಾರ ಬರುತ್ತದೆ. ತಾವು ಫೈಲ್ ಅವರ ಹತ್ತಿರ ಕಳುಹಿಸಿಕೊಡಿ.

ದಕ್ಷಿಣ ಕನ್ನಡದ ನಂದಿಕೂರು ಉಷ್ಣ ಸ್ಥಾವರದ ವಿವರ.

೩೮೪ ಶ್ರೀ ಬಿ. ಎಂ, ಇದಿನಬ್ಬ (ಉಳ್ಳಾಲ).—ಮಾನ್ಯ ಕೈಗಾರಿಕಾ, ಇಂಧನ ಮತ್ತು ವಕ್ಫ್ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ದಕ್ಷಿಣ ಕನ್ನಡದ ನಂದಿಕೂರು ಉಷ್ಣ ಸ್ಥಾವರದ ಕಾರ್ಯ ಪ್ರಾರಂಭವಾಗಿದೆಯೇ ;

ಆ) ಅದಕ್ಕಾಗಿ ವಶಪಡಿಸಿಕೊಂಡ ಜಮೀನಿನ ವಿಸ್ತೀರ್ಣ ಎಷ್ಟು? ಇನ್ನು ಎಷ್ಟು ಜಮೀನನ್ನು ವಶಪಡಿಸಿಕೊಳ್ಳುವುದು ಬಾಕಿ ಇದೆ;

ಇ) ಈ ಸ್ಥಾವರಕ್ಕೆ ಕರ್ನಾಟಕ ಸರ್ಕಾರವು ನೀಡಿರುವ ನೆರವುಗಳೇನು ;

ಈ) ಭೂಮಿ ಕಳೆದುಕೊಂಡವರಿಗೆ ತಕ್ಷಣವೇ ಪರಿಹಾರ ನೀಡಲಾಗುವುದೆ? ಹಾಗೂ ಪುನರ್ವಸತಿಯ ವ್ಯವಸ್ಥೆ ಮಾಡಲಾಗಿದೆಯೇ?

ಶ್ರೀ ಎಸ್. ಎಂ. ಯಾಹ್ಯಾ (ಕೈಗಾರಿಕೆ, ಇಂಧನ ಮತ್ತು ಪರ್ಕ್ಸ್ ಸಚಿವರು).—

ಅ) ಮೂಲ ಭೂತ ಅವಶ್ಯಕ ಕೆಲಸಗಳಾದ ಭೂ ಸಮೀಕ್ಷೆ, ರಸ್ತೆ ಹಾಗೂ ಕಟ್ಟಡಗಳ ಕೆಲಸಗಳು ಪ್ರಗತಿಯಲ್ಲಿದೆ.

ಆ) ಈ ಸ್ಥಾವರಕ್ಕೆ ಒಟ್ಟು ೪೨೬೦ ಎಕರೆ ಜಮೀನು ಬೇಕಾಗಿದ್ದು, ಈಗಾಗಲೇ ೧೧೦ ಎಕರೆ ಸರ್ಕಾರಿ ಜಮೀನನ್ನು ಬಿಡುಗಡೆ ಮಾಡಲಾಗಿದೆ. ೨೪೫೦ ಎಕರೆಯಷ್ಟು ಖಾಸಗಿ ಜಮೀನನ್ನು ಸ್ವಾಧೀನಪಡಿಸಿಕೊಳ್ಳಲು ೬ (೧)ರ ಪ್ರಕಾರ ಪ್ರಕಟಣೆಯನ್ನು ಕೊಡಲಾಗಿದೆ. ಉಳಿದ ಸುಮಾರು ೭೦೦ ಎಕರೆಯಷ್ಟು ಸರ್ಕಾರಿ ಜಮೀನನ್ನು ಬಿಡುಗಡೆ ಮಾಡಬೇಕಾಗಿದೆ ಮತ್ತು ೨೦೦೦ ಎಕರೆಯಷ್ಟು ಖಾಸಗಿ ಜಮೀನನ್ನು ಇನ್ನೂ ಸ್ವಾಧೀನಪಡಿಸಿಕೊಳ್ಳಬೇಕಾಗಿದೆ.

ಇ) ರಾಜ್ಯ ಸರ್ಕಾರ ಆಗತ್ಯ ಸಹಾಯ ನೀಡುವುದರ ಜೊತೆಗೆ ೨೨೦೦ ಲಕ್ಷ ರೂ.ಗಳ ವೆಚ್ಚದಲ್ಲಿ ಮುಲ್ಕಿ ಅಣೆಕಟ್ಟೆಯನ್ನು ನಿರ್ಮಾಣ ಮಾಡಿ ಘಟಕಕ್ಕೆ ಬೇಕಾದ ೨೦ ಕ್ಯೂಸೆಕ್ಸ್ ಸಿಹಿ ನೀರನ್ನು ಒದಗಿಸಲು ಒಪ್ಪಿದೆ (ಅಣೆಕಟ್ಟೆಯನ್ನು ಕರ್ನಾಟಕ ವಿದ್ಯುತ್ ನಿಗಮವು ನಿರ್ಮಿಸುವುದು).

ಈ) ಪರಿಹಾರ ನೀಡಲು ರಾಷ್ಟ್ರೀಯ ಶಾಖೋತ್ಪನ್ನ ವಿದ್ಯುತ್ ನಿಗಮವು ೩.೨೫ ಕೋಟಿ ರೂಪಾಯಿಗಳನ್ನು ಈಗಾಗಲೇ ಠೇವಣಿ ಮಾಡಿದೆ, ಪುನರ್‌ವಸತಿ ಕ್ರಮಗಳನ್ನು ಕೈಗೊಳ್ಳಲು ಒಂದು ಪುನರ್ವಸತಿ ಸಮಿತಿಯನ್ನು ರಚಿಸಲಾಗಿದೆ.

ಶ್ರೀ ಬಿ. ಎಂ. ಇದಿನಬ್ಬ.—ಸನ್ಮಾನ್ಯ ಅಧ್ಯಕ್ಷರೆ, ಕರ್ನಾಟಕಕ್ಕೆ ಬಹಳ ಪ್ರಾಮುಖ್ಯವಾದ ನಂದಿಕೂರು ಉಷ್ಣ ಸ್ಥಾವರದ ಕೆಲಸ ಬಹಳ ನಿಧಾನಗತಿಯಿಂದ ನಡೆಯುತ್ತಿದೆ ಎಂಬ ರೀತಿ ಉತ್ತರ ಹೇಳುತ್ತಿದ್ದಾರೆ. ಆದಕ್ಕೆ ೪೨೬೦ ಎಕರೆ ಭೂಮಿ ಬೇಕಾಗಿದ್ದು, ಆದರಲ್ಲಿ ಸುಮಾರು ೭೦೦ ಎಕರೆ ರಾಷ್ಟ್ರ ಸರ್ಕಾರಿ ಜಮೀನನ್ನು ಮತ್ತು ೨೦೦೦ ಎಕರೆಯಷ್ಟು ಖಾಸಗಿ ಜಮೀನನ್ನು ಸ್ವಾಧೀನಪಡಿಸಿಕೊಳ್ಳಬೇಕಾಗಿದೆ ಎಂದು ಹೇಳಿದ್ದಾರೆ. ಆದ್ದರಿಂದ ಉಷ್ಣ ಸ್ಥಾವರದ ಈ ಕೆಲಸ ವಿದ್ಯುತ್ ಸಂಚಾರದಷ್ಟೇ ಜೋರಾಗಿ ನಡೆದರೆ ಮಾತ್ರ ಬೇಗ ಫಲಕಾರಿಯಾಗುತ್ತದೆ. ಆದ್ದರಿಂದ ಈ ಭೂಮಿ ಸ್ವಾಧೀನ ಪಡಿಸಿಕೊಳ್ಳುವುದಕ್ಕೆ ಎಷ್ಟು ಟೈಮ್ ಬೇಕು?

ಶ್ರೀ ಎಸ್. ಎಂ. ಯಾಹ್ಯಾ.—ಮಾನ್ಯ ಸದಸ್ಯರಿಗೆ ತಿಳಿದಹಾಗೆ, ಲ್ಯಾಂಡ್ ಅಕ್ವಿಸಿಷನ್ ಸ್ವಲ್ಪ ಕಷ್ಟದ ಕೆಲಸ. ಅದರಲ್ಲಿ ಯಾರೆಲ್ಲ ತಮ್ಮ ಮನೆಯನ್ನು ಮತ್ತು ಭೂಮಿಯನ್ನು ಬಿಡಬೇಕಾಗುತ್ತದೊ ಅವರಿಗೆ ಸರಿಯಾಗಿ ಸೆಟಲ್‌ಮೆಂಟ್ ಮಾಡಿ ಕಳುಹಿಸಬೇಕಾಗುತ್ತದೆ. ಅಂತು ನಾವು ಅದನ್ನು ಬಹಳ ಶೀಘ್ರದಲ್ಲಿ ಮಾಡಬೇಕೆಂದು ಇದ್ದೇವೆ, ಏಕೆಂದರೆ ಇದು ರಷ್ಯನ್ ಅಸಿಸ್ಟೆನ್ಸ್‌ನಿಂದ ಬರುವಂಥ ಮುಖ್ಯವಾದ ಒಂದು ಪ್ರಾಜೆಕ್ಟ್.

ಶ್ರೀ ಬಿ. ಎಂ. ಇದಿನಬ್ಬ.—ಅಧ್ಯಕ್ಷರೆ, ಇದರಲ್ಲಿ ಭೂಮಿ ಕಳೆದುಕೊಂಡು ಹೋಗತಕ್ಕ ಜನರಿಗೆ ತಕ್ಷಣ ಏನಾದರೂ ಪುನರ್ವಸತಿ ಮಾಡುವ ವ್ಯವಸ್ಥೆ ಇದೆಯೇ ಎಂದು ಕೇಳಿದ್ದೇನೆ. ಪುನರ್ವಸತಿ ಸಮಿತಿ ಕೆಲಸ ಪ್ರಾರಂಭ ಮಾಡುತ್ತದೆ ಎಂದು ಹೇಳಿದ್ದಾರೆ. ಆದರೆ ಆ ಪುನರ್ವಸತಿ ಸಮಿತಿ ಏನಾದರೂ ಕೆಲಸ ಪ್ರಾರಂಭ ಮಾಡಿದೆಯೇ? ಆ ಪುನರ್ವಸತಿ ಎಲ್ಲಿ ಎಂದು ನಿಶ್ಚಯ ಆಗಿದೆಯೇ? ಅಲ್ಲಿಯ ಜನರಿಗೆ ನಮ್ಮನ್ನು ಎಲ್ಲಿ ಕಳುಹಿಸುತ್ತಾರೋ ಹೇಗೆ ಕಳುಹಿಸುತ್ತಾರೋ ಎಂದು ಭಯವುಂಟು. ಆದರೆ ಎಲ್ಲಾದರೂ ಜಾಗ ನಿಶ್ಚಯ ಮಾಡಿದ್ದೀರಾ? ಆ ಪುನರ್‌ವಸತಿ ಸಮಿತಿ ಕೆಲಸ ಮಾಡಿದೆಯೋ ಎಂದು ಕೇಳಲಿಕ್ಕೆ ಬಯಸುತ್ತೇನೆ.

ಶ್ರೀ ಎಸ್. ಎಂ. ಯಾಹ್ಯಾ.—ಕಮಿಟಿ ಈಗತಾನೇ ಆಗಿದೆ. ನಾವು ರೀಹ್ಯಾಬಿಲಿಟೇಷನ್‌ಗಾಗಿ ೩ ಕೋಟಿ ೨೫ ಲಕ್ಷ ರೂಪಾಯಿ ಸಹ ಕೊಟ್ಟಿದ್ದೇವೆ. ಮಾನ್ಯ ಮಂತ್ರಿಗಳಾದ ಮೊಯಿಲಿಯಪ್ಪರೇ ಆ ಸಮಿತಿಯ ಅಧ್ಯಕ್ಷರು ಎಂದು ತೋರುತ್ತದೆ.